ಶ್ರೀ ಕೆ.ಎನ್. ನಾಗೇಗೌಡ :— ಈ ವಾರದಲ್ಲಿ ಮೀಟಿಂಗ್ ಕರೆದು 880 ರೂಪಾಯಿಗಳನ್ನು ಮಂಡ್ಯ ಶುಗರ್ ಫ್ಯಾಕ್ಟರಿ ಮತ್ತು ಚಾಮುಂಡೇಶ್ವರಿ ಫ್ಯಾಕ್ಟರಿಯಿಂದ ಕೊಡಿಸಿ ಕೊಡುತ್ತೇವೆ. ಅದರಲ್ಲಿ ಏನೂ ತೊಂದರೆಯಿಲ್ಲ.

(ಓ) ಬಗರ್ ಹುಕುಂ ಸಾಗುವಳಿ ಬಗ್ಗೆ.

ಶ್ರೀ ಶಿವಾನಂದ ನಾಯಕ್ (ಭಟ್ಕಳ) :— ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಅಧಿಕಾರಿಗಳಿಗೆ ಮೆಸೇಜ್ ಕಳುಹಿಸಿದ್ದೇವೆ ಎಂದು ಇವರು ಹೇಳಿದರು. ಈಗ ಅಲ್ಲಿ ಲಾಟಿ ಚಾರ್ಜ್ ಆಗಿ ನಾಲ್ಕು ಜನ ರೈತರ ತಲೆ ಹೊಡೆದು ಹಾಕಿದ್ದಾರೆ. ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕು.

(ಮಾನ್ಯ ಸದಸ್ಯರು ಸದನದ ಬಾವಿಗೆ ಧರಣಿಗೆ ಬಂದರು)

Mr. SPEAKER :— He is an young man. He should realise.

ಶ್ರೀ ಬಿ.ಎಸ್. ಯಡಿಯೂರಪ್ಪ :— ನಾವು ಏನೊಂದು ತೀರ್ಮಾನ ಮಾಡಿದ್ದೇವೆ ಎಂದರೆ, ಇನ್ನು ನಾಲ್ಕಾರು ದಿವಸಗಳಲ್ಲಿ ಈ ಅಧಿವೇಶನ ಮುಗಿದು ನಾವು ಚುನಾವಣೆಗೆ ಹೋಗುವಂಥ ಸಂದರ್ಭ ಇದೆ. ಅದಕ್ಕಾಗಿ, ಶಾಂತ ರೀತಿಯಲ್ಲಿ ಈ ಸದನದ ಕಾರ್ಯಕಲಾಪಗಳು ಮುಗಿಯಲಿ, ನಾವು ವೆಲ್‌ಗೆ ಹೋಗುವುದು, ಧರಣಿ ಮಾಡುವುದು, ಸತ್ಯಾಗ್ರಹ ಮಾಡುವುದು, ವಾಕ್-ಔಟ್ ಮಾಡುವುದು ಬೇಡ, ಇವುಗಳಿಂದ ಏನೂ ಉಪಯೋಗವಾಗುವುದಿಲ್ಲ. ಎನ್ನುವ ತೀರ್ಮಾನಕ್ಕೆ ಬಂದು ನಾವು ಸಂಯಮದಿಂದ ವರ್ತನೆ ಮಾಡುತ್ತಿದ್ದೇವೆ. ಈಗ ತಾನೇ ತಾವು ತಮ್ಮ ಕನ್ಸರ್ವೇಟರ್ಸ್ ಮೂಲಕ ಡೈರೆಕ್ಷನ್ಸ್ ಕೊಡಿಸಿದಿರಿ. ಮಾನ್ಯ ಯಡಿಯೂರಪ್ಪನವರೇ ತಾವು ಈ ಬಗ್ಗೆ ಮಾತನಾಡುತ್ತೇವೆ ಎಂದು ಅವರು ಹೇಳಿದರು. ಹೋದವಾರ ಇವರಿಬ್ಬರೂ ಸಹ ಇಲ್ಲಿ ಇದನ್ನು ಪ್ರಸ್ತಾಪ ಮಾಡಿದರು. ಇಷ್ಟಾದ ಮೇಲೂ ಸಹ ಈಗ ಅಲ್ಲಿ ನಾಲ್ಕು ಜನ ರೈತರ ತಲೆ ಹೊಡೆದಿದ್ದಾರೆ. ಆ ಫೋಟೋಗಳನ್ನು ಕೂಡ ನಾನು ಮಾನ್ಯ ಸ್ಪೀಕರ್‌ರವರಿಗೆ ಕಳುಹಿಸಿಕೊಟ್ಟಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಕಳೆದ ಹತ್ತಾರು ವರ್ಷಗಳಿಂದ ಎಲ್ಲೆಲ್ಲಿ ಜಮೀನು ಸಾಗುವಳಿ ಮಾಡುತ್ತಿದ್ದಾರೆ, ಇಂಥ ಸಂದರ್ಭವನ್ನು ಉಪಯೋಗ ಮಾಡಿಕೊಂಡು ಅರಣ್ಯ ಮಾಡುತ್ತೇವೆ ಎಂದು ಗುಂಡಿಗಳನ್ನು ತೆಗೆದು ರೈತರ ಮಾರಣ ಹೋಮ ಮಾಡಲು ಹೊರಟರೆ ನಾವು ಅದನ್ನು ಟಾಲರೇಟ್ ಮಾಡಿಕೊಂಡು ಇಲ್ಲಿ ಕುಳಿತುಕೊಳ್ಳಬೇಕೇ? ಸ್ವಾಮಿ, ತಾವು ಈ ಬಗ್ಗೆ ವರದಿ ತರಿಸಿಕೊಳ್ಳಿ. ನಾವು ಏನು ಮಾಡಬೇಕು ಎಂದು ತಾವೇ ಹೇಳಿ. ನಮ್ಮ ಜಾಗದಲ್ಲಿ ಇದ್ದರೆ ತಾವು ಏನು ಮಾಡುತ್ತಿದ್ದಿರಿ? ಒಂದು ಕ್ಷಣ ನೀವು ಮಂತ್ರಿಗಳಲ್ಲ ಎಂದು ತಿಳಿದುಕೊಂಡು ಯೋಚನೆ ಮಾಡಿ, ನಿಮ್ಮ ಕ್ಷೇತ್ರದಲ್ಲಿ ಇದು ಆಗದಿದ್ದರೆ ನೀವು ಏನು ಮಾಡುತ್ತಿದ್ದೀರಿ? ಇಲ್ಲಿ ಸದನ ನಡೆಯುತ್ತಿದೆ. ಬೆಳಿಗ್ಗೆಯಿಂದ ಸಂಬಂಧಪಟ್ಟ

ಪೋಲೀಸರನ್ನು ಕಾಂಟ್ಯಾಕ್ಟ್ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಅರಣ್ಯ ಇಲಾಖೆಯ ಒಬ್ಬ ಅಧಿಕಾರಿಯೂ ಮಾತನಾಡಲು ಸಿದ್ಧರಿಲ್ಲ. ಅಷ್ಟೂ ಜನರು ಇದನ್ನು ಒಂದು ಪ್ರೆಸ್ಟೀಜ್ ಎಂದು ತಿಳಿದುಕೊಂಡು, ಗುಂಡಿ ತೆಗೆದುದನ್ನು ಮುಚ್ಚುತ್ತಿದ್ದಾರಲ್ಲ ಎಂದು ತಲೆ ಹೊಡೆಯುವಂಥ ಕೆಲಸ ಮಾಡುವುದಾದರೆ ಇದನ್ನು ಟಾಲರೇಟ್ ಮಾಡಲು ನಾವು ಸಿದ್ಧವಿಲ್ಲ.

(ಈ ಹಂತದಲ್ಲಿ ಯಡಿಯೂರಪ್ಪನವರ ನೇತೃತ್ವದಲ್ಲಿ ಬಿ.ಜೆ.ಪಿ. ಸದಸ್ಯರು ಸದನದ ಬಾವಿಗೆ ಬಂದು ಧರಣಿ ಪ್ರಾರಂಭಿಸಿದರು ಮತ್ತು ಯಡಿಯೂರಪ್ಪನವರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್ :— ಒಂದು ಕಡೆ, ಇಡೀ ರಾಜ್ಯಾದ್ಯಾಂತ ನಡೆಯುತ್ತಿರತಕ್ಕಂಥ ಜಮೀನು ಒತ್ತುವರಿಯನ್ನು ಬಿಟ್ಟು ಬಿಡುತ್ತಾರೆ. ಮತ್ತೊಂದು ಕಡೆ ಉಳುಮೆ ಮಾಡುತ್ತಿರುವಂಥ ಬಡವರನ್ನು ಒಕ್ಕಲೆಬ್ಬಿಸಿ ಅಲ್ಲಿ ಗುಂಡಿ ತೆಗೆಯತಕ್ಕಂಥಾದ್ದು ನಿರಂತರವಾಗಿ ನಡೆದಿದೆ. ನೂರಾರು ಎಕರೆಯನ್ನು ಅಕ್ರಮವಾಗಿ ಇಟ್ಟುಕೊಂಡಿರುವವರನ್ನು ಬಿಡಿಸಲು ಇವರ ಕೈಯ್ಯಲ್ಲಿ ಆಗುತ್ತಿಲ್ಲ; ಗುಂಡಿ ತೆಗೆಯುತ್ತಿರುವಂಥ ಬಡವರ ಮೇಲೆ ಧಾಳಿ ಮಾಡತಕ್ಕಂಥಾದ್ದು ಇಡೀ ಕರ್ನಾಟಕ ರಾಜ್ಯದಲ್ಲಿ ನಿರಂತರವಾಗಿ ನಡೆಯುತ್ತಿದೆ. ಆ ಬಡವರಿಗೆ ರಕ್ಷಣೆ ಕೊಡುವಲ್ಲಿ ಸರ್ಕಾರ ವಿಫಲವಾಗಿದೆ, ಮಂತ್ರಿಗಳು ಸಹ ವಿಫಲರಾಗಿದ್ದಾರೆ. ಇದು ಸರಿಯಲ್ಲ, ನಾನೂ ಧರಣಿ ಮಾಡುತ್ತೇನೆ, ನನ್ನ ಕ್ಷೇತ್ರದಲ್ಲೂ, ಇದು ನಡೆದಿದೆ.

(ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ಸದನದ ಬಾವಿಗೆ ಬಂದು ಧರಣಿ ಪ್ರಾರಂಭಿಸಿದರು)

ಶ್ರೀ ಕೆ. ಪುಟ್ಟಣ್ಣಯ್ಯ :— ಇಡೀ ರಾಜ್ಯಾದ್ಯಂತ ಇದು ನಡೆಯುತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ರಾಜ್ಯದಲ್ಲಿ ಎಲ್ಲಾ ಕಡೆ ಉತ್ತಿರತಕ್ಕಂಥ ಜಮೀನುಗಳಿಗೆ ಹೋಗಿ ಗುಂಡಿ ಹೊಡೆಯತಕ್ಕಂಥ ಕೆಲಸವನ್ನು ಇವರು ಮಾಡುತ್ತಿದ್ದಾರೆ.

ಶ್ರೀ ಡಿ. ಮಂಜುನಾಥ್ (ಮಾನ್ಯ ಅರಣ್ಯ ಸಚಿವರು) :— ಇವರು ಗುಂಡಿ ಹೊಡೆಯುವುದೂ ಬೇಡ, ಅವರು ಅಲ್ಲಿಗೆ ಬರುವುದೂ ಬೇಡ. ಈಗ ಸದ್ಯಕ್ಕೆ ಅವರೂ ಪ್ರವೇಶ ಮಾಡುವುದು ಬೇಡ, ನಮ್ಮವರೂ ಪ್ರವೇಶ ಮಾಡುವುದು ಬೇಡ ಎಂದು ಆದೇಶ ಕೊಟ್ಟಿದ್ದೇವೆ.

(ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದ ಮಾತನಾಡಿದರು)

ಶ್ರೀ ಡಿ. ಮಂಜುನಾಥ್ :— ಇವತ್ತು ನಮಗೆ ಬಂದಿರುವ ಸಮಸ್ಯೆಯ ಬಗ್ಗೆ ನಾನು ಹೇಳುತ್ತಿದ್ದೇವೆ. ಇಲ್ಲಿ ನಿಂತು ಮಾತನಾಡಬಾರದು. ಬೇಕಾದರೆ ಅವರು ಅಲ್ಲಿ ಅವರ ಸೀಟಿಗೆ ಹೋಗಿ ಮಾತನಾಡಲಿ.

ಅಧ್ಯಕ್ಷರು :— ಮಾನ್ಯ ಸದಸ್ಯರು ವೆಲ್‌ನಿಂದ ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಡಿ. ಮಂಜುನಾಥ್ :— ನಾವು ಈಗಾಗಲೇ ಲಿಖಿತ ಆದೇಶ ಕೊಟ್ಟಿದ್ದೇವೆ. ಅವರು ಗಿಡ ಹಾಕುವುದು ಬೇಡ. ಇವರು ಹೋಗಿ ಉಳುವುದೂ ಬೇಡ, ಸದ್ಯಕ್ಕೆ ನಿಲ್ಲಿಸಿಬಿಡಿ ಎಂದು ಹೇಳಿದ್ದೇವೆ.

(ಈ ಹಂತದಲ್ಲಿ ಅನೇಕ ಜನ ಸದಸ್ಯರು ಬಾವಿಯಿಂದ ಏಕಕಾಲಕ್ಕೆ ಮಾತನಾಡಿದರು)

ಶ್ರೀ ಮಾಟಾಳ್ ನಾಗರಾಜ್ (ತಮ್ಮ ಸ್ಥಾನದಿಂದ) :— ಈ ಬಗ್ಗೆ ಸರ್ಕಾರ ಸ್ಪಷ್ಟ ನಿರ್ದೇಶನ ಕೊಡಬೇಕು, ಸ್ಪಷ್ಟ ಆದೇಶ ಕೊಡಬೇಕು. ಇದು ಇಡೀ ರಾಜ್ಯಾದ್ಯಂತ ನಡೆದಿದೆ. ಎಲ್ಲೆಲ್ಲಿ ಅರಣ್ಯ ಒತ್ತುವರಿಯಾಗಿದೆ, ಅದನ್ನು ಬಿಟ್ಟಿದ್ದಾರೆ. ಬಡವರು ಉಳುಮೆ ಮಾಡುತ್ತಿರುವಂಥ ಕಡೆ ಗುಂಡಿ ತೆಗೆಯತಕ್ಕಂಥಾದ್ದು ನಿರಂತರವಾಗಿ ನಡೆಯುತ್ತಿದೆ. ಯಾವ ಕೆರೆಗಳನ್ನೂ ಬಿಟ್ಟಿಲ್ಲ. ಕುಡಿಯುವ ನೀರಿಗೆ ಅವಕಾಶವಿಲ್ಲ. ಎಲ್ಲಾ ಕೆರೆಗಳಲ್ಲಿ ಗುಂಡಿ ತೆಗೆಯುತ್ತಿದ್ದಾರೆ. ಇದರಲ್ಲಿ ಒಂದು ರೀತಿಯ ಮೋಸ ನಡೆಯುತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಾನು ವೈಯಕ್ತಿಕವಾಗಿ ಈ ವಿಚಾರವನ್ನು ನಿಮ್ಮ ಗಮನಕ್ಕೆ ತಂದಿದ್ದೇವೆ. 1978ನೇ ಇಸವಿಯಿಂದ ಉಳುಮೆ ಮಾಡುತ್ತಿರತಕ್ಕಂಥ ಭೂಮಿಯ ವಿಚಾರಕ್ಕೆ ಹೋಗುತ್ತಾರೆ. ಆ ವಿಚಾರಕ್ಕೆ ಹೋಗುವುದು ಬೇಡ ಎಂದು ತಾವು ಫೋನ್ ಮಾಡಿ ಫಾರೆಸ್ಟ್ ಅಧಿಕಾರಿಗಳಿಗೆ ಹೇಳಿದಿರಿ. ಆದರೂ ಕೂಡ ಅವರು ಅದೇ ಕೆಲಸ ಮಾಡುತ್ತಿದ್ದಾರೆ.

ಶ್ರೀ ಡಿ. ಮಂಜುನಾಥ್ :— ಇದು ಮೀಸಲು ಅರಣ್ಯದಲ್ಲಿ ಮಾಡುತ್ತಿರುವಂಥಾದ್ದು; ಮೀಸಲು ಅರಣ್ಯ ಪ್ರದೇಶದಲ್ಲಿ ಯಾರಾದರೂ ಬಗರ್ ಹುಕುಂ ಮಾಡುತ್ತಿದ್ದರೆ, ಅದು ಅಕ್ರಮ ಪ್ರವೇಶ, ಅದನ್ನು ತಡೆಗಟ್ಟಬೇಕು ಎಂದು ಸುಪ್ರೀಂ ಕೋರ್ಟ್ ಆದೇಶವೇ ಇದೆ. ಈ ವಿಷಯದಲ್ಲಿ ಮಾನ್ಯ ಕರ್ಕಿಯವರು ಹೇಳಿದರು; ಅವರು ಹೇಳಿದರು..

(ಈ ಹಂತದಲ್ಲಿ ಮಾಟಾಳ್ ನಾಗರಾಜ್‌ರವರು ಮಾತನಾಡಲು ಎದ್ದು ನಿಂತರು)

ಶ್ರೀ ಡಿ. ಮಂಜುನಾಥ್ :—ತಾವು ಸ್ವಲ್ಪ ಇರಿ, ನಾನು ಮಾತನಾಡುತ್ತಿದ್ದೇನೆ.

ಶ್ರೀ ಮಾಟಾಳ್ ನಾಗರಾಜ್ :— ತಾವು ಏಕೆ ಸಿಟ್ಟಿಗೇಳುತ್ತೀರಿ? ಸಿಟ್ಟಿಗೇಳುವುದು ಬೇಡ, ಸ್ವಲ್ಪ ಸಾವಧಾನವಾಗಿ ಕೇಳಿ.

ಅಧ್ಯಕ್ಷರು :— ನೀವು ಮಾತ್ರ ಸಿಟ್ಟು ಮಾಡಿಕೊಳ್ಳಬಹುದೇ?

ಶ್ರೀ ಡಿ. ಮಂಜುನಾಥ್ :— ಅವರು ಬೇಕಾದರೆ ಸಿಟ್ಟಿಗೇಳಬಹುದುಯ

ಶ್ರೀ ವಾಟಾಳ್ ನಾಗರಾಜ್:— ಅವರ ಉತ್ತರದಿಂದ ಸಿಟ್ಟು ಬರುತ್ತದೆ. ನನ್ನ ಕ್ಷೇತ್ರದಲ್ಲಿ ನೂರಾರು ಎಕರೆ ಪ್ರದೇಶದಲ್ಲಿ ಗುಂಡಿ ಹೊಡೆಯುತ್ತಿದ್ದಾರೆ. ತಾವು ನಮಗೂ ಸ್ವಲ್ಪ ರಕ್ಷಣೆ ಕೊಡಿ.

ಅಧ್ಯಕ್ಷರು:— ನಾನು ಪೂರ್ಣ ನಿಮ್ಮ ಪರ ಇದ್ದೇನೆ.

ಶ್ರೀ ವಾಟಾಳ್ ನಾಗರಾಜ್:— ಇಲ್ಲ, ಪೂರ್ಣವಲ್ಲ, ಅಪೂರ್ಣ, ಅರ್ಧಂಬರ್ಧ ಮಾತ್ರ ಇದ್ದೀರಿ.

ಶ್ರೀ ಡಿ. ಮಂಜುನಾಥ್ :— ನಾನು ಈಗಲೂ ಹೇಳುತ್ತಿದ್ದೇನೆ, ಯಾವ ಪೋಲೀಸ್ ಅಧಿಕಾರಿಗಳನ್ನು ಕರೆಸುವುದೂ ಬೇಡ, ಯಾರೂ ಬೇಡ, ಸಧ್ಯಕ್ಕೆ ಅವರೂ ಪ್ರವೇಶ ಮಾಡುವುದು ಬೇಡ, ಇವರೂ ಪ್ರವೇಶ ಮಾಡುವುದು ಬೇಡ ಎಂದು ಹೇಳಿದ್ದೇನೆ. ಸಧ್ಯಕ್ಕೆ ಅಷ್ಟು ಮಾಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ:— ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲಕಡೆ, ಅದು ಗುಲ್ಬರ್ಗ ಇರಬಹುದು, ಬೀದರ್ ಇರಬಹುದು, ಶಿವಮೊಗ್ಗ ಇರಬಹುದು, ತುಮಕೂರು ಇರಬಹುದು, ಎಲ್ಲಾ ಕಡೆ ಸಿ ಅಂಡ್ ಡಿ ಕ್ಲಾಸ್ ಲ್ಯಾಂಡ್ ಎಂದು ಇದೆ. ಈ ಸಿ ಅಂಡ್ ಡಿ ಕ್ಲಾಸ್ ಲ್ಯಾಂಡನ್ನು ಫಾರೆಸ್ಟ್‌ನವರಿಗೆ ವಹಿಸಿಕೊಟ್ಟಮೇಲೆ ನಮ್ಮ ಕ್ಯಾಬಿನೆಟ್ ಗವರ್ನಮೆಂಟ್ಸ್ ವಹಿಸಿಕೊಟ್ಟಿತ್ತು, ಈಗಿರತಕ್ಕಂಥ ಗವರ್ನಮೆಂಟಿನವರೂ ಕೂಡ ವಹಿಸಿಕೊಟ್ಟಿದ್ದಾರೆ. ಈಗ ಸಿ ಅಂಡ್ ಡಿ ಲ್ಯಾಂಡ್‌ನ್ನು ಸರ್ಕಾರ ವಹಿಸಿಕೊಂಡಮೇಲೆ ಅದನ್ನು ಅರಣ್ಯ ಇಲಾಖೆಯವರು ತೆಗೆದುಕೊಂಡರು. ಅರಣ್ಯ ಇಲಾಖೆಯವರು ಆ ಲ್ಯಾಂಡ್‌ನ್ನು ವಹಿಸಿಕೊಂಡ ಮೇಲೆ ಆ ಲ್ಯಾಂಡ್‌ನಲ್ಲಿ ಹತ್ತಾರು ವರ್ಷಗಳಿಂದ ಕಲ್ಟಿವೇಟ್ ಮಾಡಿಕೊಂಡು ಯಾರು ಇದ್ದರು ಅವರಿಗೆ- ಇದು ಫಾರೆಸ್ಟ್ ಲ್ಯಾಂಡ್ ಆಗಿದ್ದು ಇಲ್ಲಿಗೆ ನೀವು ಪ್ರವೇಶ ಮಾಡತಕ್ಕದ್ದಲ್ಲ. ಎಂದು ಹೇಳಿ ಅಲ್ಲಿ ಕಲ್ಟಿವೇಟ್ ಮಾಡಿಕೊಂಡಿದ್ದವರನ್ನು ಒಕ್ಕಲೆಬ್ಬಿಸುತ್ತಿದ್ದಾರೆ. ರಾಜ್ಯದ ಎಲ್ಲಾ ಕಡೆ ಈ ರೀತಿ ಮಾಡುತ್ತಿದ್ದಾರೆ. ಅರಣ್ಯ ಇಲಾಖೆಗೆ ಬಂದಂಥ ಸಿ ಅಂಡ್ ಡಿ ಕ್ಲಾಸ್ ಲ್ಯಾಂಡ್ ಅಥವಾ ರಿಸರ್ವ್ ಫಾರೆಸ್ಟ್ ಲ್ಯಾಂಡ್ ಎಂದು ಸರ್ಕಾರದ ಮತಿಯಿಂದ ವಹಿಸಿಕೊಟ್ಟಂಥ ಭೂಮಿ ಮತ್ತು ಸುತ್ತೋಲೆ ಪ್ರಕಾರ ಸರ್ಕಾರದಿಂದ ನಿಗದಿಯಾದ ದಿನಾಂಕದೊಳಗೆ ಇದ್ದವರನ್ನು ರೆಗ್ಯುಲರೈಸ್ ಮಾಡಬೇಕು ಎನ್ನತಕ್ಕಂಥದ್ದು ಏನು ಇತ್ತು, ಅದರ ಒಳಗಡೆ ಇರತಕ್ಕಂಥವನ್ನು ಸರ್ಕಾರ ಅರಣ್ಯ ಇಲಾಖೆ ರೆಗ್ಯುಲರೈಸ್ ಮಾಡಿ, ದಯವಿಟ್ಟು ಜನರಲ್ ಆಗಿ ವೆರಿಫೈ ಮಾಡಿ ಅಂಥವು ಏನಾದರೂ ಇದ್ದರೂ ಕೂಡ ಸಧ್ಯಕ್ಕೆ ಇಡೀ ರಾಜ್ಯಕ್ಕೆ ಸ್ಟೇ ಕೊಡಿ. ಈ ರೀತಿ ಮಾಡದೇ ನೀವು ಪಿಕ್ ಅಂಡ್ ಚೂಸ್ ಮಾಡಿದರೆ ಇದೇ ಪ್ರಾಬ್ಲಂ ಪುನರಾವರ್ತನೆಯಾಗುತ್ತದೆ. ಇಮತ್ತು ಏನೋ

ಸೀರಿಯಸ್ ಗಲಾಟೆ ಇದೆಯೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು, ರಾಜ್ಯದಲ್ಲಿ ಇದು ಬಹಳ ಗಂಭೀರವಿಷಯವಾಗಿದೆ. ವೈಯಕ್ತಿಕವಾಗಿ ಇಂಡಿವಿಜಿಯಲ್ ಕೇಸ್‌ನಲ್ಲಿ ಏನು ನಿರ್ಣಯ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ. ಆದರೆ ಈ ಸಮಸ್ಯೆ ರಾಜ್ಯಾದ್ಯಂತ ಇದೆ. ಮತ್ತು ಈ ಟ್ರಾನ್ಸ್‌ಫರ್ ಆದಂಥ ಜಮೀನು ಬಗ್ಗೆ ಕೂಡ ಅರಣ್ಯ ಇಲಾಖೆಯವರು ಒಂದು ನಿಲುವು ತೆಗೆದುಕೊಂಡು ಏಪಿಕ್ಟ್ ಮಾಡುತ್ತಾರೆ, ಯಾರು ಹಣ ಕೊಡುತ್ತಾರೋ ಅವರಿಗೆ ಕಲ್ಟಿವೇಟ್ ಮಾಡಲು ಅಲೋ ಮಾಡುತ್ತಾರೆ, ಹಣವನ್ನು ಕೊಡುವುದಕ್ಕೆ ಆಗದೇ ಇರುವಂಥ ಬಡವರು ಯಾರು ಇರುತ್ತಾರೋ ಅವರನ್ನು ಬಿತ್ತನೆ ಮಾಡುವವರಿಗೆ ಸುಮ್ಮನೆ ಇದ್ದು ಬಿತ್ತನೆ ಆದಮೇಲೆ ಅವರನ್ನು ಅಲ್ಲಿಂದ ಎಪಿಕ್ಟ್ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಅದಕ್ಕೆ ದಯವಿಟ್ಟು ಇದರ ಬಗ್ಗೆ ಸರ್ಕಾರ ಒಂದು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಏನಾದರೊಂದು ಪರಿಹಾರವನ್ನು ತಕ್ಷಣ ಕಂಡುಹಿಡಿಯಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಕಾರ್ಯಕಲಾಪಗಳು ಚೆನ್ನಾಗಿ ನಡೆಯಬೇಕು, ಅನೇಕ ಪ್ರಮುಖ ವಿಷಯಗಳಿಗೆ ಚರ್ಚೆ ಆಗಬೇಕು ಎನ್ನುವ ಉದ್ದೇಶದಿಂದ ಈ ಸದನದ ಎರಡೂ ಕಡೆಯವರು ಬಹಳ ಸಹಕಾರ ಕೊಡುತ್ತಾ ಬಂದಿದ್ದೇವೆ. ಈ ಒಂದು ಅರಣ್ಯ ಪ್ರದೇಶವನ್ನು ಟೆಸ್ಟ್‌ಗೆ ಎಂದು ತೆಗೆದುಕೊಳ್ಳಿ, ಅಧಿಕಾರಿಗಳನ್ನು ನಂಬುವುದು ಬೇಡ, ನಮ್ಮನ್ನು ನಂಬಿಕೊಳ್ಳಬೇಡಿ, ಹೆಲಿಕಾಪ್ಟರ್ ಇದೆಯಲ್ಲವೇ, ತಮಗೆ ನಂಬಿಕೆ ಇರುವಂಥ ಇಬ್ಬರು ಮಂತ್ರಿಗಳನ್ನು ಕರೆದುಕೊಂಡು ನಡಿಯಿರಿ, ಹೋಗೋಣ. ಅಲ್ಲಿ ನೋಡಿ ಬರೋಣ. ಸ್ಪೆಸಿಫಿಕ್ ಆಗಿ ಈ ಒಂದು ಕೇಸ್‌ನಲ್ಲಿ ನೀವು ನೋಡಬೇಕು. ಬಹಳ ವರ್ಷಗಳಿಂದ ಅವನು ಬಗರ್ ಹುಕುಂ ಸಾಗುವಳಿ ಜಮೀನು ಮಾಡುತ್ತಿದ್ದಾರೆಂದರೆ ಅಲ್ಲಿ ಅರಣ್ಯ ಇಲಾಖೆಯಿಂದ ಗುಂಡಿ ತೆಗೆಯುವುದು ತಪ್ಪು ಎಂದು ಹೇಳಿ ಆ ಜಮೀನಿನಲ್ಲಿ ರೈತ ಮುಂದುವರಿಯುವುದಕ್ಕೆ ಅವಕಾಶ ಮಾಡಿಕೊಡಿ. ಅಲ್ಲಿ ಬಹಳ ವರ್ಷಗಳಿಂದ ರೈತ ಇಲ್ಲದಿದ್ದರೆ ಆ ಸ್ಥಳದಲ್ಲಿಯೇ ಅವರನ್ನು ಒಕ್ಕಲೆಬ್ಬಿಸಲು ನಾವು ನಿಮಗೆ ಸಹಕಾರ ಕೊಟ್ಟುಬರುತ್ತೇವೆ, ಅಲ್ಲಿ ಯಾವನೂ ಇರತಕ್ಕಂಥದ್ದು ಬೇಡ. ಸಂಬಂಧಪಟ್ಟ ಜಮೀನು ಅರಣ್ಯ ಇಲಾಖೆಗೆ ಇರಲಿ. ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಹಿಂದೆ ಆತ ಡಿಕ್ಲರೇಷನ್ ಕೊಟ್ಟಿದ್ದಾನೆ, ದಾಖಲೆ ಇದೆ, ಶಿವಮೊಗ್ಗ ಜಿಲ್ಲೆಯಲ್ಲಿ ಮತ್ತು ಇತರೇ ಕಡೆ ಕೂಡ ಅರಣ್ಯ ಇಲಾಖೆಯವರು ಇಂಥ ಕಡೆ ಗುಂಡಿ ತೆಗೆಯುತ್ತಿದ್ದಾರೆ. ಅರಣ್ಯ ಉಳಿಯಬೇಕು ಎಂದು ಹೇಳುವವರು ನಾವು. ಹೊಸದಾಗಿ ಒಂದು ಎಕರೆ ಅರಣ್ಯ ಪ್ರದೇಶದಲ್ಲಿ ಕೂಡ ಬಗರ್ ಹುಕುಂ ಸಾಗುವಳಿ ಆಗಬಾರದು. ಅರಣ್ಯ ಉಳಿಯದಿದ್ದಲ್ಲಿ ಮಳೆ ಬಾರದೆ ರೈತ ಹಾಳಾಗಿ ಹೋಗುತ್ತಾನೆ ಎನ್ನುವುದು ನಮಗೆ ಗೊತ್ತಿದೆ. ಆದರೆ ಈಗ ಅರಣ್ಯಾಧಿಕಾರಿಗಳು ಎಲ್ಲಾ ಕಡೆ ಗುಂಡಿಗಳನ್ನು ತೋಡಿ ಕಿರುಕುಳ ಕೊಡುತ್ತಿದ್ದಾರೆ. ನಾನು ಇಲ್ಲಿ ಬಹಳವಾಗಿ ಆ ಬಡವರ ಬಗ್ಗೆ ಮಾತನಾಡುತ್ತಿದ್ದೇನೆ. ಈ ಕೇಸ್‌ನಲ್ಲಿ 60

ಎಕರೆ ಜಮೀನಿನಲ್ಲಿ 68 ಕುಟುಂಬಗಳು ವಾಸ ಮಾಡುತ್ತಿವೆ. ನೀವು ಆ ಫೋಟೋವನ್ನು ನೋಡಿ. ಎಷ್ಟು ವರ್ಷದಿಂದ ಅವನು ಸಾಗುವಳಿ ಮಾಡಿದ್ದಾನೆ ಎನ್ನುವುದನ್ನು ಆ ಜಮೀನು ನೋಡಿದ ತಕ್ಷಣ ರೈತರ ಮಕ್ಕಳಾದ ನಮಗೂ ನಿಮಗೂ ಗೊತ್ತಾಗುವುದಿಲ್ಲವೇ ಸ್ವಾಮಿ. ಮಧ್ಯಾಹ್ನದ ನಂತರ ನಾವು ಊಟ ಮಾಡಿ ನಾನು ಹೇಳಿದ ಸ್ಥಳಕ್ಕೆ ಹೋಗಿ ನೋಡಿಕೊಂಡು ಬರೋಣ. ಇದು ನಿಜವೆಂದು ಸರ್ಕಾರಕ್ಕೆ ಮನವರಿಕೆ ಆದರೆ ಇಡೀ ರಾಜ್ಯದಲ್ಲಿ ಈ ತರಹ ಗುಂಡೆ ತೆಗೆದುಕೊಂಡು ರೈತರನ್ನು ಮಾರಣ ಹೋಮ ಮಾಡುವುದನ್ನು ತಪ್ಪಿಸಿ. ಇಲ್ಲವೆಂದರೆ ಅಲ್ಲಿಯೇ ಡೈರೆಕ್ಷನ್ಸ್ ಕೊಟ್ಟು ಬನ್ನಿ, ನೀವು ಏನು ಹೇಳತ್ತೀರೋ ಅದನ್ನು ಕೇಳುವುದಕ್ಕೆ ನಾವು ಸಿದ್ಧವಿದ್ದೇವೆ. ಮಾನ್ಯ ಅರಣ್ಯ ಮಂತ್ರಿಗಳು ಹೇಳಿದ ಮೇಲೆ ಅಲ್ಲಿ 200 ಜನ ಪೊಲೀಸ್‌ನವರು ಇದ್ದಾರೆ, ಲಾಠಿಚಾರ್ಜ್ ಆಗಿ 4 ಜನರ ತಲೆ ಒಡೆದಿದೆ.

ಶ್ರೀ ಡಿ. ಮಂಜುನಾಥ್ :— ಮಾನ್ಯ ಅಧ್ಯಕ್ಷರೆ, ನಾನು ಈಗತಾನೆ ಇನ್‌ಫಾರ್ಮೇಷನ್ ತರಿಸಿದ್ದೇನೆ. ನಮ್ಮ ಇಲಾಖಾಧಿಕಾರಿಗಳು ಗ್ಯಾಲರಿಯಲ್ಲಿ ಕುಳಿತಿದ್ದಾರೆ. ಸದ್ಯಕ್ಕೆ ಅಲ್ಲಿ ಏನೂ

(ಗೊಂದಲ)

ಮಾಡುವುದಕ್ಕೆ ಹೋಗಬೇಡಿ ಎಂದು ಹೇಳಿದ್ದೇನೆ. ಅಲ್ಲಿ ರೈತರು ಕೆಲಸ ಪ್ರಾರಂಭಿಸುವುದೂ ಬೇಡ. ಇಲಾಖೆಯವರು ಅದನ್ನು ಸ್ಟಾಪ್ ಮಾಡುವುದೂ ಬೇಡ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೆ, ಇದು ಸರಿಯಾಗುವುದಿಲ್ಲ. ರೈತರಿಗೂ ಬೇಡ, ಇವರಿಗೂ ಬೇಡ ಎಂದು ಹೇಳಿದರೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ಸಮಸ್ಯೆ ಬಗೆಹರಿಯುವವರೆಗೆ ಅಲ್ಲಿಯೇ ರೈತರು ಇರಲಿ. ನಾವು ತಮಗೆ ಏನು ಹೇಳಿದೆವು ಎಂದರೆ ಮಾನ್ಯ ಮಂತ್ರಿಗಳಾದ ತಾವೇ ಸ್ಥಳಕ್ಕೆ ಹೋಗಿ ನೋಡಿ ಎಂದು ಹೇಳಿದರೆ ಅದಕ್ಕೆ ನೀವು ತಯಾರಾಗಿಲ್ಲ. ಸ್ಥಳಕ್ಕೆ ಹೋಗಿ ಅಲ್ಲಿ ರೈತರ ತಪ್ಪಾಗಿದೆಯೇ ಅಥವಾ ನಿಮ್ಮ ಇಲಾಖೆಯ ಅಧಿಕಾರಿಗಳ ತಪ್ಪು ಆಗಿದೆಯೇ ಎನ್ನುವುದನ್ನು ನೋಡಿ.

ಶ್ರೀ ಡಿ. ಮಂಜುನಾಥ್ :— ಅಧಿವೇಶನ ಮುಗಿದ ಮೇಲೆ ಅಲ್ಲಿಗೆ ಹೋಗೋಣ. ಅಲ್ಲಿಯವರೆಗೆ ಏನೂ ಮಾಡುವುದು ಬೇಡ.

ಡಾ: ಎಂ.ಪಿ. ಕರ್ಕಿ :— ಮಾನ್ಯ ಅಧ್ಯಕ್ಷರೆ, ನಾನು ಶುಕ್ರವಾರ ದಿವಸ ಇಲ್ಲಿಗೆ ಬಂದು- ಈ ರೀತಿ ರೈತರಿಗೆ ಬಲಾತ್ಕಾರ ಮಾಡುತ್ತಿದ್ದಾರೆ, ತಾವು ಏನು ಮಾಡುತ್ತೀರಿ. ಎಂದು ಮಾನ್ಯ ಸಚಿವರಿಗೆ ಕೇಳಿದೆ. ಘರ್ಷಣೆ ಆಗತಕ್ಕಂಥ ಯಾವುದೇ ವಿಷಯವನ್ನು ಮಾಡಬೇಡಿ ಎಂದು ಸಂಬಂಧಪಟ್ಟ ಕನ್ಸರವೇಟರ್ ಆಫ್ ಫಾರೆಸ್ಟ್ ಅವರಿಗೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ನನ್ನಮುಂದೆಯೇ ಫೋನ್ ಮಾಡಿ ಹೇಳಿದ್ದಾರೆ. ಯಾವುದಕ್ಕೂ ನಾವು ಮಾತನಾಡಿಕೊಂಡು ನಂತರ ಮಾಡೋಣ ಎಂದು ಮಾನ್ಯ ಸಚಿವರು ಫೋನ್ ಮಾಡಿ

ತಿಳಿಸಿದರೂ ಸಹ ಅಲ್ಲಿಯ ಅಧಿಕಾರಿಗಳು ಪೊಲೀಸರನ್ನು ಕರೆದುಕೊಂಡು ಹೋಗಿ ಬಲಾತ್ಕಾರ ಮಾಡಿ ತಲೆ ಒಡೆಯತಕ್ಕಂಥದ್ದು ಏನಿದೆ ಇದು ಬಹಳ ಅಮಾನವೀಯ ವಿಷಯವಾಗಿದೆ. ಸರ್ಕಾರದ್ದು ಈ ರೀತಿಯ ತೀರ್ಮಾನ ಸರಿಯಲ್ಲ.

ಅಧ್ಯಕ್ಷರು :— ಸನ್ಮಾನ್ಯ ಯಡಿಯೂರಪ್ಪನವರಿಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ- ಅಧಿವೇಶನ ಮುಗಿದ ನಂತರ ಸಂಬಂಧಿಸಿದ ಶಾಸಕರ ಜೊತೆಗೆ ನಾನು ಸ್ಥಳಕ್ಕೆ ಹೋಗುವುದಕ್ಕೆ ತಯಾರಿದ್ದೇನೆ. ಎಂದು ಹೇಳಿದ್ದಾರೆ. ಈಗ ತಕ್ಷಣಕ್ಕೆ ಅಲ್ಲಿ ಘರ್ಷಣೆ ಆಮಾಯ್ದೋ ಮಾಡುವುದಕ್ಕೆ ಅವರ ಆಫೀಸರ್ಸ್‌ಗೆಲ್ಲ ಹಿಂದೆ ಬನ್ನಿ ಎಂದು ಹೇಳಿ ಪೊಲೀಸರು ಅಲ್ಲಿಗೆ ಹೋಗಿ ಗದ್ದಲ ಮಾಡುವುದು ಬೇಡ ಎಂದು ಹೇಳಿದ್ದಾರೆ.

ಡಾ: ಎಂ.ಪಿ. ಕರ್ಕಿ :— ಇದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಶುಕ್ರವಾರ ಹೇಳಿದ್ದಾರೆ.

ಅಧ್ಯಕ್ಷರು :— ಮಾನ್ಯ ಕರ್ಕಿಯವರೇ ಈಗ ಏನು ಮಾಡಬೇಕು ಅವರು ಶುಕ್ರವಾರ ಹೇಳಿದ್ದಾರೆ. ಅದರ ಪ್ರಕಾರ ನಡೆಯಲಿಲ್ಲ; ಆದ್ದರಿಂದ ಇವತ್ತು ಅಲ್ಲಿ ಗಲಾಟೆ ಆಯಿತು. ಈ ವಿಚಾರವನ್ನು ನೀವು ಇಲ್ಲಿ ಪ್ರಸ್ತಾಪ ಮಾಡಿದಿರಿ, ಸಂಬಂಧಪಟ್ಟ ಮಂತ್ರಿಗಳು ಅಧಿವೇಶನ ಮುಗಿದ ಮೇಲೆ ಬರುತ್ತೇನೆ ಎಂದು ಹೇಳಿದ್ದಾರೆ. ಶುಕ್ರವಾರ ಹೇಳಿದರು, ಶುಕ್ರವಾರ ಹೇಳಿದರು ಎಂದು ತಾವು ಹೇಳುತ್ತಾ ಇದ್ದರೆ, ಈಗ ಏನು ಮಾಡೋಣ ಹೇಳಿ.

ಡಾ: ಎಂ.ಪಿ. ಕರ್ಕಿ :— ಮಾನ್ಯ ಅಧ್ಯಕ್ಷರೆ, ಯಾರು ಸಂಬಂಧಪಟ್ಟ ಅಧಿಕಾರಿಗಳು ಇದ್ದಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ರೈತರ ಮೇಲೆ ಕೇಸ್ ಹಾಕಿರುವುದನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು :— ಯಾವುದೇ ಸರ್ಕಾರ ಇಲ್ಲಿ ಹೇಳಿದ ಮಾತ್ರಕ್ಕೆ ಅವರನ್ನು ಯಾವಾಗಲೂ ಸಸ್ಪೆಂಡ್ ಮಾಡತಕ್ಕಂಥ ನಿದರ್ಶನಗಳು ಇರುವುದಿಲ್ಲ. ಸಂಬಂಧಪಟ್ಟ ಮಂತ್ರಿಗಳು ವರದಿ ತರಿಸಿಕೊಳ್ಳಬೇಕಾಗುತ್ತದೆ. ನಂತರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಾವು ಇಲ್ಲಿಯೇ ದಿಢೀರ್ ಎಂದು ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಮಾನ್ಯ ಅಧ್ಯಕ್ಷರೆ, ಪೊಲೀಸರು ಅಲ್ಲಿ ರೈತರ ತಲೆ ಒಡೆಯುವುದಕ್ಕೆ ಪ್ರಾರಂಭಿಸಿರುವುದರಿಂದ ರೈತರು ತಿರುಗಿನಿಂತು ಇವರ ತಲೆ ಒಡೆಯುವುದಕ್ಕೆ ಶುರುಮಾಡಬಹುದು. ಅಧಿಕಾರಿಗಳು ಪೊಲೀಸರ ಜೊತೆ ಅಲ್ಲಿಗೆ ಹೋಗಿ ರೈತರ ಮೇಲೆ ದೌರ್ಜನ್ಯ ನಡೆಸಿ ಅವರ ತಲೆ ಒಡೆಯುತ್ತಾರೆಂದು ಹೇಳಿದರೆ ರೈತರು ತಲೆ ಒಡೆಸಿಕೊಂಡು ಸುಮ್ಮನಿರಬೇಕೇ?

ಅಧ್ಯಕ್ಷರು :— ಮಾನ್ಯ ಯಡಿಯೂರಪ್ಪನವರೇ, ನಮ್ಮ ದೇಶದ ಜನರಿಗೆ ಸಿಟ್ಟೇ ಬರುವುದಿಲ್ಲ. ಒಬ್ಬ ಅತೀ ಭ್ರಷ್ಟ ವಿಲೇಜ್ ಅಕೌಂಟೆಂಟಿನ ಎದುರು ಹೋಗಿ ನಮ್ಮ ಜನ ಬಗ್ಗುತ್ತಾರೆ, ಅವನನ್ನು ಕೂಡ ಹಿಡಿದುಕೊಂಡು ತದಕುವುದಿಲ್ಲ, ನಮ್ಮ ಜನರಿಗೆ ಎಲ್ಲಿ ಬರುತ್ತದೆ ಸಿಟ್ಟು, ಜನರಿಗೆ ಸಿಟ್ಟು ಇದ್ದಿದ್ದರೆ ಈ ದೇಶ ಹೀಗೆ ಇರುತ್ತಿತ್ತೇ? ಅವರಿಗೆ ಸಿಟ್ಟು ಇದ್ದಿದ್ದರೆ ನಾವೆಲ್ಲಾ ಹೀಗೆ ಇರುತ್ತಲೇ ಇರಲಿಲ್ಲ. ನಾವು ಬಹಳ ಹುಷಾರಾಗಿ ಬರುತ್ತಿದ್ದೆವು.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಅಧ್ಯಕ್ಷರೆ, ಈ ಅಧಿವೇಶನ ಮುಗಿದ ತಕ್ಷಣ ಯಾರು ಅಕ್ರಮ ಪ್ರವೇಶ ಮಾಡಿರುತ್ತಾರೆ, ಅಕಸ್ಮಾತ್ ಏನಾದರೂ ರೈತರು ಬಗರ್ ಹುಕುಂ ಸಾಗುವಳಿ ಬಹಳ ವರ್ಷಗಳಿಂದ ಮಾಡುತ್ತಾ ಇದ್ದರೆ ಅವರಿಗೂ ತೊಂದರೆ ಆಗದಂತೆ ನೋಡಿಕೊಳ್ಳಲಾಗುವುದು. ಸುಪ್ರೀಂ ಕೋರ್ಟಿನ ಆದೇಶದಲ್ಲಿ ಇದು ಒಂದು ಒಪ್ಪಿಗೆ ಆಗಿರತಕ್ಕಂಥ ಕಾದಿಟ್ಟಿಂಥ ಒಂದು ಅರಣ್ಯ. ಎನ್ನುವಂಥ ಮಾತನ್ನು ಹೇಳಿದ್ದಾರೆ. ಇದು ತಮಗೂ ಗೊತ್ತಿದೆ. ಸರ್ಕಾರ ರೈತರ ವಿರೋಧಿಯಾಗಿ ನಡೆದುಕೊಳ್ಳುವುದಕ್ಕೆ ಯಾವಾಗಲೂ ಕೂಡ ಸಿದ್ಧವಿಲ್ಲ. ಇನ್ನು ಅಲ್ಲಿ ಲಾಠಿ ಚಾರ್ಜ್ ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಲಾಠಿ ಚಾರ್ಜ್ ಮಾಡಿದಾಕ್ಷಣಕ್ಕೆ, ಕೇಸ್ ಹಾಕಿದಾಕ್ಷಣಕ್ಕೆ ಅವರ ಮೇಲೆ ಕ್ರಮ ಕೈಗೊಳ್ಳಬೇಕು ಎನ್ನುವುದು ಒಂದು ಕಡೆಯಾದರೆ, ಈ ಕೂಡಲೇ ಆ ಕೇಸನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಸದನದಲ್ಲಿ ಹೇಳುವುದಕ್ಕೆ ಬರುವುದಿಲ್ಲ. ಅದಕ್ಕೂ ಕೂಡ ಕೆಲವೊಂದು ನಿಯಮಾವಳಿಗಳು ಇವೆ. ಆದ್ದರಿಂದ ಎಸ್.ಪಿ. ಯವರಿಂದ ವರದಿ ತರಿಸಿಕೊಳ್ಳಬೇಕಾಗುತ್ತದೆ, ಅದು ನಮ್ಮ ಸಚಿವಸಂಪುಟದ ಸಭೆಯ ಮುಂದೆ ಬರುತ್ತದೆ. ತತ್ ಕ್ಷಣದಲ್ಲಿ ಯಾವುದೇ ಸರ್ಕಾರ ಸದನದಲ್ಲಿ ಒಂದು ನಿಲುವಳಿ ಸೂಚನೆ ಅಥವಾ ಒಂದು ವಿಷಯದ ಮೇಲೆ ಗಮನಸೆಳೆಯುವುದರೊಳಗೆ ಉತ್ತರ ಕೊಡಬೇಕು ಎನ್ನುವುದು ಆಗುವುದಿಲ್ಲ. ಆದ್ದರಿಂದ ದಯವಿಟ್ಟು ತಾವು ಸದನದಲ್ಲಿಯ ತಮ್ಮ ಸ್ಥಳದಲ್ಲಿ ಹೋಗಿ ಕುಳಿತುಕೊಳ್ಳಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಸದನದ ಕಾರ್ಯಕಲಾಪಗಳು ಬಹಳ ಮುಖ್ಯವಾಗಿರುವುದರಿಂದ ಇದು ಮುಗಿದ ತಕ್ಷಣವೇ ತಾವು ಪ್ರಸ್ತಾಪಿಸಿದ ವಿಷಯಕ್ಕೆ ಗಮನಹರಿಸಲಾಗುವುದು. ಅಲ್ಲಿಯವರೆಗೆ ಅಧಿಕಾರಿಗಳು ರೈತರ ಮೇಲೆ ದೌರ್ಜನ್ಯ ಮಾಡಲಾರದಂತೆ, ಅಲ್ಲಿ ಯಾವುದೇ ಒಂದು ಗುಳಿಯನ್ನು ತೆಗೆಯದಂತೆ ಆದೇಶವನ್ನು ಈಗಲೇ ಕೊಡುತ್ತೇವೆಂದು ಹೇಳಿರುವುದರಿಂದ ದಯವಿಟ್ಟು ಸಹಕಾರ ಮಾಡಬೇಕೆಂದು ನಾವು ತಮ್ಮ ಮೂಲಕ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ಇದು ಒಂದು ನಿರ್ದಿಷ್ಟವಾದ ಕೇಸ್ ಆಗಿದ್ದು ಇದರ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಇಡೀ ರಾಜ್ಯದಲ್ಲಿ ಕೂಡ ಇಂಥ ಕೇಸುಗಳು ಬಹಳ ಇವೆ. ಸಿ ಅಂಡ್ ಡಿ ಜಾಗ ಜಮೀನನ್ನು ಅರಣ್ಯ ಇಲಾಖೆಯವರು ತೆಗೆದುಕೊಂಡ ನಂತರ ಅದರಲ್ಲಿ ಯಾವ ಯಾವ ಜಮೀನನ್ನು

ಕಲ್ಪಿಸೇಟ್ ಮಾಡಿದ್ದಾರೆ ಅದನ್ನು ಟ್ರಾನ್ಸಫರ್ ಮಾಡಬೇಕು ಎಂದು ಒಂದು ನಿರ್ಣಯ ಆಯಿತು. ಇಷ್ಟು ಇದ್ದರೂ ಕೂಡ ಪುನಃ ಅಧಿಕಾರಿಗಳು ಅಂಥವರಿಗೆ ತೊಂದರೆ ಕೊಡುತ್ತಿದ್ದಾರೆ.

ಅಧ್ಯಕ್ಷರು :— ಅದಕ್ಕಿಂತ ದೊಡ್ಡ ತಮಾಷೆಯೆಂದರೆ, ಅರಣ್ಯ ಇಲಾಖೆಯ ರೇಂಜರ್‌ಗಳು, ಡಿ.ಎಫ್.ಓ.ಗಳು ಅವರಿಗೆ ಡಿಮ್ಯಾಂಡ್ಸ್ ಕೇಳುವುದಕ್ಕೆ ಪ್ಲಾಟ್ಸ್ ಮಾಡುತ್ತಾರಲ್ಲವೇ, ಇದು ನಮಗೆ ಟ್ರಾನ್ಸಫರ್ ಆಗಿದೆ, ಎಂದು ಹೊಸ ಹೊಸ ಏರಿಯಾಗಳನ್ನು, ಅಲ್ಲಿನ ಜಮೀನುಗಳು ಇವರಿಗೆ ಸೇರಿದೆ ಎಂದು ಆ ರೆಕಾರ್ಡ್‌ಸ್‌ನ್ನು ಎಲ್ಲಿಂದ ತರುತ್ತಾರೋ ಗೊತ್ತಾಗುತ್ತಿಲ್ಲ. ಹೆಚ್ಚಿಚ್ಚು ಡಿಮ್ಯಾಂಡ್ ಕೇಳುವುದಕ್ಕೆ ಜಾಸ್ತಿ ಪ್ಲಾಟ್ಸನ್ನು ತೋರಿಸುತ್ತಾರೆ, ಅಲ್ಲಿ ಗುಳಿಯ ನ್ನು ತೋಡುವುದಿಲ್ಲ, ಸಸಿ ನೆಡುವುದಿಲ್ಲ, ಇದನ್ನೆಲ್ಲಾ ದುಡ್ಡು ಮಂಜೂರು ಮಾಡಿಸಿಕೊಂಡು ತಿಂದುಹಾಕುವುದಕ್ಕೆ ಮಾಡುತ್ತಿದ್ದಾರೆ. ಇದು ನಮಗೆ ದೊಡ್ಡ ಸಮಸ್ಯೆಯಾಗಿ ಬಿಟ್ಟಿದೆ. ಈ ತೊಂದರೆಯನ್ನು ಸ್ವತಃ ನಾನೇ ಅನುಭವಿಸುತ್ತಾ ಇದ್ದೇನೆ. ನಮ್ಮಲ್ಲಿ ಪ್ಲಾಂಟೇಷನ್ ಕಾರ್ಪೊರೇಷನ್ ನವರು ಅವರಿಗೆ ಸಾಗುವಳಿ ಚೀಟಿ ಕೊಟ್ಟುಬಿಟ್ಟಿದ್ದಾರೆ. ಅದಕ್ಕೆ ಈಗ ನಮಗೆ ಚೀಫ್ ಕನ್ಸರ್ವೇಟರ್ ರವರು ಪತ್ರ ಬರೆಯುತ್ತಾ ನಾವು ಪ್ಲಾಂಟೇಷನ್ ಕಾರ್ಪೊರೇಷನ್ ಅಭಿವೃದ್ಧಿಗೆ ಇಷ್ಟು ಲಕ್ಷ ಖರ್ಚು ಮಾಡಿದ್ದೇವೆ, ಆ ದುಡ್ಡು ತುಂಬಿರಿ, ಆಮೇಲೆ ಸಂಬಂಧಪಟ್ಟ ಜಮೀನನ್ನು ಬಿಟ್ಟುಕೊಡುತ್ತೇವೆ. ಎಂದು ಹೇಳುತ್ತಾರೆ. ಅಲ್ಲಿ ಆ ಜಮೀನಿಗೂ ಅವರಿಗೂ ಸಂಬಂಧವೇ ಇಲ್ಲ. ನಮ್ಮವರೇ ಸಾಗುವಳಿ ಮಾಡುತ್ತಿದ್ದಾರೆ. ಅದು ರಿವಿನ್ಯೂ ಲ್ಯಾಂಡ್, ಲೀಸ್‌ಗೆ ಕೊಟ್ಟಿದ್ದರು ಎಂದು ಹೇಳುತ್ತಾರೆ. ಮುನ್ನೀಫ್ ಕೋರ್ಟ್‌ನಲ್ಲಿ ಕೇಸ್ ಹಾಕುತ್ತಾರೆ. ಅವರೆಲ್ಲರೂ ಬಹಳ ವಿಚಿತ್ರರಾಗಿದ್ದಾರೆ. ಉತ್ಪ್ರೇಕ್ಷೆಯಿಂದ ಅಥವಾ ನಿಮ್ಮ ಜೊತೆ ಸಹಾನುಭೂತಿ ಇಲ್ಲವೆಂದು ನಾನು ಈ ವಿಷಯವನ್ನು ಹೇಳುತ್ತಿಲ್ಲ. ಇದನ್ನು ಪರಿಹಾರ ಮಾಡುವುದಕ್ಕೋಸ್ಕರ ನಾವೆಲ್ಲಾ ಒಂದು ಉಪಾಯವನ್ನು ಕಂಡುಹಿಡಿಯಬೇಕು.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ದೇವೇಗೌಡರು ಪ್ರಧಾನಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಕ್ಲಾಸಿಫೈಡ್ ಆಗಿರತಕ್ಕಂಥ ಭೂಮಿಗಳನ್ನು ವರ್ಗಾವಣೆ ಮಾಡಿದಮೇಲೆ, ಕೆಲವು ಸಿ ಅಂಡ್ ಡಿ. ಭೂಮಿಗಳನ್ನು ನಿಮಗೆ ಕೊಡುತ್ತೇವೆಂದು....

ಅಧ್ಯಕ್ಷರು :— ಪ್ಲಾಂಟೇಷನ್ ಕಾರ್ಪೊರೇಷನ್ ಚೀಫ್ ಕನ್ಸರ್ವೇಟರ್‌ರವರಿಗೆ ನಾನು ಒಂದು ಪತ್ರ ಬರೆದಿದೇದೆ, ಈ ಪತ್ರದಲ್ಲಿ ಯಾವ್ಯಾವ ಭಾಷೆಯನ್ನು ಬಳಸಿದ್ದೆ ಎಂಬುದಕ್ಕೆ ಪತ್ರ ತರಿಸಿ ಓದಿದರೆ ಗೊತ್ತಾಗುತ್ತದೆ. ಇವರೆಲ್ಲರೂ ನಾಚಿಕೆ ಬಿಟ್ಟವರಾಗಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಅರಣ್ಯ ಉಳಿಸುವುದಕ್ಕೆ ಮತ್ತು ರಕ್ಷಣೆ ಮಾಡುವುದಕ್ಕೋಸ್ಕರ ನಮ್ಮೆಲ್ಲರ ಸಹಕಾರ ಇದ್ದೇ ಇರುತ್ತದೆ. ಹೊಸದಾಗಿ ಒಂದು ಎಕರೆ ಅರಣ್ಯ ಭೂಮಿಯಲ್ಲಿ ಯಾರೂ ಸಹ ಕಾಲಿಡಬಾರದೆಂದು ನಮ್ಮ ನಿಲುವಾಗಿದೆ.

ಇದರಲ್ಲಿ ಎರಡು ಮಾತಿಲ್ಲ. ಹತ್ತಾರು ವರ್ಷಗಳಿಂದ ಯಾರು ಇಂಥ ಭೂಮಿಗಳನ್ನು ಸಮ ಮಾಡಿ ಬೆಳೆ ಬೆಳೆಯುತ್ತಿದ್ದಾರೆಯೋ ಅಂಥ ಕಡೆ, ಇದನ್ನು ನಾವೇ ಕ್ಲೀನ್ ಮಾಡಿದ್ದೇವೆಂದು ಬಿಲ್ ಮಾಡಿಕೊಳ್ಳುವುದಕ್ಕೋಸ್ಕರ ಇವರಿಗೆ ಕಿರುಕುಳ ಕೊಡುತ್ತಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಈ ರೀತಿಯಾಗಿ ನಿರಂತರವಾಗಿ ನಡೆಯುತ್ತಿದೆ. ಇವತ್ತು ಎಲ್ಲೋ ಒಂದು ಕಡೆ ಗುಂಡಿ ತೆಗೆಯುತ್ತಿರಬಹುದು ಅಥವಾ ಮೈನರ್ ಫಾರೆಸ್ಟ್, ಸಿ ಅಂಡ್ ಡಿ ಲ್ಯಾಂಡ್ ಇರಬಹುದು, ಇದಕ್ಕಾಗಿ ಇಡೀ ರಾಜ್ಯದಲ್ಲಿ ಕಿರುಕುಳ ನಡೆಯುತ್ತಿದೆ, ಇದನ್ನು ತಾವು ಪರಿಶೀಲನೆ ಮಾಡಬೇಕು.

ಅಧ್ಯಕ್ಷರು :— ಮಾನ್ಯ ಪ್ರಕಾಶ್‌ರವರು ಹೇಳಿರತಕ್ಕಂಥ ಉತ್ತರ ಅತ್ಯಂತ ಸಮಂಜಸವಾಗಿದೆ. ಮಾನ್ಯ ಪ್ರಕಾಶ್‌ರವರು ಏನು ಹೇಳುತ್ತಿದ್ದಾರೆಂದರೆ, ನಮ್ಮದು ರೈತ ವಿರೋಧಿ ನಿಲುವಲ್ಲ; ಈ ತಕ್ಷಣ ಅಲ್ಲಿ ಪರಿಹಾರ ಕೊಡುತ್ತೇವೆ ಮತ್ತು ಅಧಿವೇಶನ ಮುಗಿದ ನಂತರ ಮಾನ್ಯ ಮಂತ್ರಿಗಳು ಅಲ್ಲಿಗೆ ಹೋಗಿ ಬರುತ್ತಾರೆ. ಅಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗೆ ನಾವು ಅವಕಾಶ ಕೊಡುವುದಿಲ್ಲವೆಂದು ಅವರು ಸದುದ್ದೇಶದಿಂದ ಮಾತನಾಡಿದ್ದಾರೆ ಹಾಗೂ ನಮ್ಮಲ್ಲಿ ವಿನಂತಿ ಕೂಡ ಮಾಡಿಕೊಂಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಅಧಿವೇಶನ ಮುಗಿದ ನಂತರ ನಾವೆಲ್ಲಾ ಹೋಗೋಣ. ಆದರೆ, ಭೇಟಿ ನೀಡಿದಾಗ ಸ್ಥಳದಲ್ಲಿ ನೀವು ಏನು ಬೇಕಾದರೂ ತೀರ್ಮಾನ ತೆಗೆದುಕೊಳ್ಳಿ. ಅಲ್ಲಿಯವರೆಗೆ ರೈತನಿಗೆ ಯಾವುದೇ ರೀತಿಯ ತೊಂದರೆ ಕೊಡದೇ ಅಲ್ಲಿ ಮುಂದುವರಿಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ನೀವು ಸ್ಥಳ ಪರಿಶೀಲನೆ ಮಾಡಿದಂಥ ಸಂದರ್ಭದಲ್ಲಿ ನಿಮಗೆ ಇದು ಸರಿಯಿಲ್ಲವೆಂದು ತಿಳಿದು ಬಂದರೆ ಮುಂದಿನ ಕ್ರಮ ತೆಗೆದುಕೊಳ್ಳಿ, ಇದಕ್ಕೆ ನಾವು ಸಹ ಸಂಪೂರ್ಣ ಸಹಕಾರವನ್ನು ಕೊಡುತ್ತೇವೆ.

ಅಧ್ಯಕ್ಷರು :— ಅಧಿವೇಶನ ಮುಗಿದ ಮೇಲೆ ಹೋಗುತ್ತಾರೆ, ನಾಲ್ಕು ದಿವಸದಲ್ಲಿ ಅವರೇನು ಮರಗಳನ್ನು ನೆಡುವುದಕ್ಕಾಗುವುದಿಲ್ಲ.

ಶ್ರೀ ಡಿ. ಮಂಜುನಾಥ್ (ಮಾನ್ಯ ಅರಣ್ಯ ಸಚಿವರು) :— ಈಗ ವೈರ್‌ಲೆಸ್ ಮೂಲಕ ಮಾಹಿತಿಯನ್ನು ಸೂಚಿಸುವಂತೆ ಅಧಿಕಾರಿಗಳಿಗೆ ತಿಳಿಸಿದ್ದೇನೆ.

ಅಧ್ಯಕ್ಷರು :— ಮಾನ್ಯ ಯಡಿಯೂರಪ್ಪನವರೆ, ನಿಮ್ಮ ಸಲಹೆಯನ್ನು ನಾನು ಕೂಡ ಒಪ್ಪುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್ :— ಲಾಠಿ ಛಾರ್ಜ್‌ನಿಂದ ಕೆಲವರ ತಲೆ ಬುರುಡೆ ಹೊಡೆದಿದೆ ಎಂದು ತಾವು ಪ್ರಸ್ತಾಪ ಮಾಡಿದ್ದೀರಿ, ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ಸಾಯಂಕಾಲದೊಳಗೆ ತರಿಸಿ ಈ ಸದನಕ್ಕೆ ತಿಳಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಅಧಿವೇಶನ ಮುಗಿದ ನಂತರ ನಾವೆಲ್ಲಾ ಅಲ್ಲಿಗೆ ಹೋಗೋಣ. ಅಲ್ಲಿಯವರೆಗೆ ರೈತರಿಗೆ ಏನು ತೊಂದರೆಯಾಗದಂತೆ ಒಂದು ಡೈರೆಕ್ಷನ್ ಕೊಡಿ. ನೀವು ಸ್ಥಳ ಪರಿಶೀಲನೆ ಮಾಡಿದ ಮೇಲೆ ನಿಮಗೆ ಸರಿ ಕಾಣದಿದ್ದರೆ ಇದನ್ನು ಅಲ್ಲಿಯೇ ಬಿಟ್ಟು ಬಿಡಿ.

ಶ್ರೀ ಡಿ. ಮಂಜುನಾಥ್ :— ರೈತರಿಗೆ ಯಾವುದೇ ತೊಂದರೆ ಮಾಡಬಾರದೆಂದು ವೈರ್‌ಲೆಸ್ ಮೂಲಕ ಸೂಚಿಸುವುದಕ್ಕೆ ಅಧಿಕಾರಿಗಳಿಗೆ ತಿಳಿಸಿದ್ದೇನೆ ಮತ್ತು ಲಾಠಿ ಚಾರ್ಜ್‌ನಿಂದ ಆಗಿರತಕ್ಕ ಘಟನೆಗಳ ಬಗ್ಗೆ ವರದಿಯನ್ನು ತರಿಸಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಇದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ತರಿಸಿಕೊಂಡು ಈ ಸದನಕ್ಕೆ ವರದಿ ಕೊಡಿ. ಇದಕ್ಕಿಂತ ಮೊದಲು ರೈತನಿಗೆ ಯಾವುದೇ ರೀತಿ ತೊಂದರೆ ಕೊಡಬಾರದೆಂದು ಡೈರೆಕ್ಷನ್ ಕೊಡಿ.

ಶ್ರೀ ಡಿ. ಮಂಜುನಾಥ್ :— ಈ ವಿಷಯವನ್ನು ವೈರ್ ಲೆಸ್ ಮೂಲಕ ತಿಳಿಸಲು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಇಡೀ ರಾಜ್ಯದಲ್ಲಿ ಈ ರೀತಿಯ ವ್ಯವಸ್ಥೆ ಆಗಬೇಕು. ಏಕೆಂದರೆ ಇವರೇ ರೈಜ್ ಮಾಡಿರತಕ್ಕಂಥ ಸ್ಪೆಸಿಫಿಕ್ ಕ್ವೆಶ್ಚನ್ ಏನಿದೆ It is an individual matter. But what about the entire farmers thse who are cultivating throught the State?

ಶ್ರೀ ಮಂಜುನಾಥ್ :— ನಿವೆಲ್ಲಾ ಇಲ್ಲಿ ಬಹಳ ಪ್ರಮುಖವಾದಂಥ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಈ ಸಮಸ್ಯೆ ಬಗ್ಗೆ ನಾನು ಮತ್ತುಮಾನ್ಯ ಕಂದಾಯ ಮಂತ್ರಿಗಳು ಒಂದು ದಿವಸ ಸಭೆಯನ್ನು ನಡೆಸಿದ್ದೇವೆ. ಅರಣ್ಯ ಮತ್ತು ಕಂದಾಯ ಇಲಾಖೆಯ ಕಾರ್ಯದರ್ಶಿಗಳನ್ನು ಕರೆಸಿ ಹೇಳಿದ್ದೇನೆ. ಬಹಳ ಕಡೆ ಇದು ಹ್ಯಾಂಡ್‌ಓವರ್ ಮಾಡಿರತಕ್ಕಂಥ ರೆಕಾರ್ಡ್‌ಗಳು ಅಪ್-ಟು-ಡೇಟ್ ಆಗಿಲ್ಲ. ಇದಕ್ಕೋಸ್ಕರ ಅರಣ್ಯ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಜಂಟಿಯಾಗಿ ಪರಿಶೀಲನೆ ಮಾಡಿ ತೀರ್ಮಾನ ಮಾಡಬೇಕೆಂದು ಒಂದು ಡೈರೆಕ್ಷನ್ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ಕೆಲವ ಕಡೆ ಈ ರೀತಿಯಾಗಿವೆ. ಇದನ್ನು ಸರಿಪಡಿಸುವುದಕ್ಕೆ ಈಗಾಗಲೇ ನಾವು ಕ್ರಮ ತೆಗೆದುಕೊಂಡಿದ್ದೇವೆ.